**National**
**Kannada**
**14.01.2025 13.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ಭಾರತೀಯ ಹವಾಮಾನ ಇಲಾಖೆಯ ೧೫೦ನೇ ಸಂಸ್ಥಾಪನಾ ದಿನದ ಪ್ರಯುಕ್ತ, ದೆಹಲಿಯಲ್ಲಿಂದು ಮಿಷನ್ ಮೌಸಮ್‌ಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ
2. ಉತ್ತರ ಪ್ರದೇಶದ ಪ್ರಯಾಗ್ ರಾಜ್ ನ ಮಹಾಕುಂಭ ಮೇಳದಲ್ಲಿ ಮಕರ ಸಂಕ್ರಾಂತಿಯ ಅಮೃತ ಸ್ನಾನ ಪ್ರಗತಿ
3. ದೇಶದ ಹಲವೆಡೆ ಇಂದು ಮಕರ ಸಂಕ್ರಾಂತಿ ಆಚರಣೆ; ಪ್ರಧಾನಿ ಸೇರಿ ಹಲವು ಗಣ್ಯರಿಂದ ಶುಭಾಶಯ
4. ಸಚಿವ ಜೈಶಂಕರ್ - ಸ್ಪೇನ್ ವಿದೇಶಾಂಗ ಸಚಿವ ಜೋಸ್ ಮ್ಯಾನುಯೆಲ್ ಭೇಟಿ; ದ್ವಿಪಕ್ಷೀಯ ಸಹಕಾರ ಬಲವರ್ಧನೆ ಕುರಿತು ಸಮಾಲೋಚನೆ
5. ದೆಹಲಿಯಲ್ಲಿ ಇಂದಿನಿಂದ ಇಂಡಿಯಾ ಓಪನ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿ; ವಿಶ್ವದ ಅಗ್ರಮಾನ್ಯ ಆಟಗಾರರು ಭಾಗಿ

<><><><>

ದೇಶವನ್ನು ಹವಾಮಾನ ಸಿದ್ಧ ಮತ್ತು ಹವಾಮಾನ ಸ್ಮಾರ್ಟ್ ರಾಷ್ಟ್ರವನ್ನಾಗಿ ಸಜ್ಜುಗೊಳಿಸಲು ಪ್ರಧಾನಿ ನರೇಂದ್ರ ಮೋದಿ ಇಂದು ಮಿಷನ್ ಮೌಸಮ್ ಗೆ ಚಾಲನೆ ನೀಡಿದರು. ದೆಹಲಿಯ ಭಾರತ್ ಮಂಟಪದಲ್ಲಿ ನಡೆದ ಭಾರತೀಯ ಹವಾಮಾನ ಇಲಾಖೆ ಐಎಂಡಿಯ ೧೫೦ ನೇ ಸಂಸ್ಥಾಪನಾ ದಿನಾಚರಣೆಯ ಸಂದರ್ಭದಲ್ಲಿ ಪ್ರಧಾನಿ ಈ ಅಭಿಯಾನಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ದೇಶದ ಹವಾಮಾನವನ್ನು ಸ್ಮಾರ್ಟ್ ಮತ್ತು ಭವಿಷ್ಯವನ್ನು ಸಿದ್ಧಗೊಳಿಸಲು ಮಿಷನ್ ಮೌಸಮ್ ಅನ್ನು ಪ್ರಾರಂಭಿಸಲಾಗಿದೆ. ಇದು ಸುಸ್ಥಿರ ಭವಿಷ್ಯ ಮತ್ತು ಭವಿಷ್ಯದ ಸನ್ನದ್ಧತೆಯ ಬಗ್ಗೆ ದೇಶದ ಬದ್ಧತೆಯ ಸಂಕೇತವಾಗಿದೆ ಎಂದು ಹೇಳಿದರು. ಐಎಂಡಿಯ ೧೫೦ ವರ್ಷಗಳ ಸುದೀರ್ಘ ಪ್ರಯಾಣವನ್ನು ಶ್ಲಾಘಿಸಿದ ಪ್ರಧಾನಿ, ಇದು ಕೇವಲ ಭಾರತೀಯ ಹವಾಮಾನ ಇಲಾಖೆಯ ಪ್ರಯಾಣವಲ್ಲ, ಇದು ದೇಶದ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಅದ್ಭುತ ಪ್ರಯಾಣವಾಗಿದೆ ಎಂದು ಹೇಳಿದರು. ಈ ೧೫೦ ವರ್ಷಗಳಲ್ಲಿ ಐಎಂಡಿ ಕೋಟ್ಯಂತರ ಭಾರತೀಯರಿಗೆ ಸೇವೆ ಸಲ್ಲಿಸಿದೆ ಮಾತ್ರವಲ್ಲ, ರಾಷ್ಟ್ರದ ವೈಜ್ಞಾನಿಕ ಪ್ರಯಾಣದ ಸಂಕೇತವಾಗಿದೆ ಎಂದು ಅವರು ಹೇಳಿದರು.

ಧ್ವನಿ: ಪ್ರಧಾನಿ ಮೋದಿ

ಇದೇ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಐಎಂಡಿಯ ೧೫೦ ನೇ ವರ್ಷಾಚರಣೆಯ ಸ್ಮರಣಾರ್ಥ ನಾಣ್ಯವನ್ನು ಬಿಡುಗಡೆ ಮಾಡಿದರು. ಹವಾಮಾನ ಸ್ಥಿತಿಸ್ಥಾಪಕತ್ವ ಮತ್ತು ಹವಾಮಾನ ಬದಲಾವಣೆ ಹೊಂದಾಣಿಕೆಗಾಗಿ ಐಎಂಡಿ ವಿಷನ್ -೨೦೪೭ ರ ದಾಖಲೆಯನ್ನು ಅವರು ಬಿಡುಗಡೆ ಮಾಡಿದರು. ಇದು ಹವಾಮಾನ ಮುನ್ಸೂಚನೆ, ಹವಾಮಾನ ನಿರ್ವಹಣೆ ಮತ್ತು ಹವಾಮಾನ ಬದಲಾವಣೆ ತಗ್ಗಿಸುವ ಯೋಜನೆಗಳನ್ನು ಒಳಗೊಂಡಿದೆ.

<><><><>

ಭಾರತೀಯ ಹವಾಮಾನ ಇಲಾಖೆ - ಐಎಂಡಿ, ಹಿಮಾಚಲ ಪ್ರದೇಶದ ಪ್ರತ್ಯೇಕ ಪ್ರದೇಶಗಳಲ್ಲಿ ಶೀತ ಗಾಳಿ ಪರಿಸ್ಥಿತಿಗಳು ಮುಂದುವರಿಯುತ್ತದೆ ಎಂದು ಹೇಳಿದೆ. ಈ ವೇಳೆ ಪಂಜಾಬ್, ಹರಿಯಾಣ, ಚಂಡೀಗಢ, ಹಿಮಾಚಲ ಪ್ರದೇಶ ಮತ್ತು ಉತ್ತರ ಪ್ರದೇಶದ ಅನೇಕ ಭಾಗಗಳಲ್ಲಿ ರಾತ್ರಿ ಮತ್ತು ಮುಂಜಾನೆ ಅತ್ಯಂತ ದಟ್ಟವಾದ ಮಂಜು ಕವಿದ ವಾತಾವರಣ ಇರಲಿದೆ ಎಂದು ಮುನ್ಸೂಚನೆ ನೀಡಿದೆ. ಮುಂದಿನ ಕೆಲವು ದಿನಗಳವರೆಗೆ ರಾಜಸ್ಥಾನ, ಬಿಹಾರ, ಉತ್ತರಾಖಂಡ, ಉಪ ಹಿಮಾಲಯನ್ ಪಶ್ಚಿಮ ಬಂಗಾಳ, ಸಿಕ್ಕಿಂ ಮತ್ತು ಈಶಾನ್ಯ ರಾಜ್ಯಗಳಲ್ಲಿ ಇದೇ ರೀತಿಯ ಪರಿಸ್ಥಿತಿಗಳನ್ನು ನಿರೀಕ್ಷಿಸಲಾಗಿದೆ.

<><><><>

ಉತ್ತರ ಪ್ರದೇಶದ ಪ್ರಯಾಗ್ ರಾಜ್‌ನ ಮಹಾಕುಂಭ ಮೇಳದಲ್ಲಿ ಮಕರ ಸಂಕ್ರಾಂತಿ ಅಮೃತ ಸ್ನಾನ ನಡೆಯುತ್ತಿದೆ.

೧೩ ಅಖಾಡಗಳಲ್ಲಿ, ಪ್ರತಿ ಅಖಾಡಕ್ಕೆ ಅದರ ಗೊತ್ತುಪಡಿಸಿದ ಸಮಯ ಮತ್ತು ಅನುಕ್ರಮವನ್ನು ತಿಳಿಸಲಾಗಿದೆ.

ಮಹಾನಿರ್ವಾಣಿ ಪಂಚಾಯತ್ ಅಖಾಡವು ತ್ರಿವೇಣಿ ಸಂಗಮದಲ್ಲಿ ಮೊದಲ ಪವಿತ್ರ ಸ್ನಾನ ಮಾಡುತ್ತದೆ ಮತ್ತು ಅಖಾಡ ನಿರ್ಮಲ್ ಪಂಚಾಯತ್ ಪವಿತ್ರ ಸ್ನಾನ ಮಾಡುವುದು ಕೊನೆಯದಾಗಿರುತ್ತದೆ. ಭವ್ಯ ಕಾರ್ಯಕ್ರಮಕ್ಕಾಗಿ ವ್ಯಾಪಕ ಭದ್ರತಾ ವ್ಯವಸ್ಥೆಗಳು ಜಾರಿಯಲ್ಲಿವೆ. ಪುಷ್ಯ ಪೂರ್ಣಿಮೆಯಂದು ವಿಶ್ವದ ಅತಿದೊಡ್ಡ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕೂಟ ಮಹಾಕುಂಭ ಪ್ರಾರಂಭವಾಗುತ್ತಿದ್ದಂತೆ ನಿನ್ನೆ ಒಂದು ಕೋಟಿ ಐವತ್ತು ಲಕ್ಷಕ್ಕೂ ಹೆಚ್ಚು ಭಕ್ತರು ಮತ್ತು ಯಾತ್ರಾರ್ಥಿಗಳು ಪವಿತ್ರ ಸ್ನಾನ ಮಾಡಿದ್ದಾರೆ.

<><><><>

ಮಕರ ಸಂಕ್ರಾಂತಿ, ಪೊಂಗಲ್, ಮಾಘ್ ಬಿಹು ಮತ್ತು ಉತ್ತರಾಯಣದ ಶುಭ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದೇಶವಾಸಿಗಳಿಗೆ ಶುಭ ಕೋರಿದ್ದಾರೆ. ಈ ಹಬ್ಬಗಳು ಪ್ರತಿಯೊಬ್ಬರ ಜೀವನದಲ್ಲಿ ಯಶಸ್ಸು ಮತ್ತು ಸಂತಸವನ್ನು ತರುತ್ತವೆ ಎಂದು ಪ್ರಧಾನಿ ಸಾಮಾಜಿಕ ಮಾಧ್ಯಮ ಪೋಸ್ಟ್ ನಲ್ಲಿ ತಿಳಿಸಿದ್ದಾರೆ. ಈ ಹಬ್ಬಗಳು ಸಂತಸ ಮತ್ತು ಒಗ್ಗಟ್ಟಿನ ಮನೋಭಾವವನ್ನು ಹೆಚ್ಚಿಸುತ್ತವೆ ಎಂದು ಅವರು ಹೇಳಿದ್ದಾರೆ.

<><><>

ಮಕರ ಸಂಕ್ರಾಂತಿ, ಪೊಂಗಲ್, ಬಿಹು ಸೇರಿದಂತೆ ವಿವಿಧ ಹೆಸರುಗಳಿಂದ ಕರೆಯಲ್ಪಡುವ ಉತ್ತರಾಯಣವನ್ನು ಇಂದು ದೇಶಾದ್ಯಂತ ಅತ್ಯಂತ ಸಡಗರ -ಸಂಭ್ರಮದಿಂದ ಆಚರಿಸಲಾಗುತ್ತಿದೆ. ಇದು ಸುಗ್ಗಿಯ ಋತು, ಕೃತಜ್ಞತೆ ಮತ್ತು ಒಗ್ಗಟ್ಟಿನ ಮನೋಭಾವವನ್ನು ಸೂಚಿಸುತ್ತದೆ. ಮಕರ ಸಂಕ್ರಾಂತಿಯು ಗಂಗಾ ಮತ್ತು ಯಮುನಾದಂತಹ ಪವಿತ್ರ ನದಿಗಳಲ್ಲಿ ಪವಿತ್ರ ಸ್ನಾನ ಮಾಡಲು ಜನರನ್ನು ಒಟ್ಟುಗೂಡಿಸಿದೆ. ತಮಿಳುನಾಡಿನಲ್ಲಿ ಪೊಂಗಲ್ ಹಬ್ಬವನ್ನು ಸಡಗರದಿಂದ ಆಚರಿಸಲಾಗುತ್ತಿದೆ. ಕುಟುಂಬಗಳು ಸಾಂಪ್ರದಾಯಿಕ ಸಿಹಿ ಖಾದ್ಯವಾದ ಪೊಂಗಲ್ ಅನ್ನು ಅಲಂಕೃತ ಮಣ್ಣಿನ ಮಡಕೆಗಳಲ್ಲಿ ಬೇಯಿಸಿ, ಕೃತಜ್ಞತೆಯ ಸಂಕೇತವಾಗಿ ಸೂರ್ಯ ದೇವರಿಗೆ ಅರ್ಪಿಸುತ್ತಿದ್ದಾರೆ.

<><><>

ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್.ಜೈಶಂಕರ್, ಸ್ಪೇನ್ ವಿದೇಶಾಂಗ ವ್ಯವಹಾರಗಳ ಸಚಿವ ಜೋಸ್ ಮ್ಯಾನುಯೆಲ್ ಅಲ್ಬರೆಸ್ ಅವರೊಂದಿಗೆ ಮ್ಯಾಡ್ರಿಡ್ ನಲ್ಲಿ ಮಾತುಕತೆ ನಡೆಸಿದರು. ವ್ಯಾಪಾರ, ಹೂಡಿಕೆ, ರಕ್ಷಣೆ, ಭದ್ರತೆ, ನಗರಾಭಿವೃದ್ಧಿ, ರೈಲ್ವೆ ಸೇರಿದಂತೆ ದ್ವಿಪಕ್ಷೀಯ ಸಹಭಾಗಿತ್ವದ ಕುರಿತು ಸಭೆಯಲ್ಲಿ ಫಲಪ್ರದ ಸಂಭಾಷಣೆ ನಡೆಯಿತು ಎಂದು ಜೈಶಂಕರ್ ಸಾಮಾಜಿಕ ಮಾಧ್ಯಮದ ಮೂಲಕ ತಿಳಿಸಿದ್ದಾರೆ. ಭಾರತ-ಇಯು ಸಂಬಂಧಗಳು ಬಲಗೊಳ್ಳಲು ಮತ್ತು ವಿಶ್ವಾಸಾರ್ಹ ಮೆಡಿಟರೇನಿಯನ್ ಪಾಲುದಾರರಾಗಿ ಸ್ಪೇನ್ ಅನ್ನು ಭಾರತ ಶ್ಲಾಘಿಸುತ್ತದೆ ಎಂದು ಸಚಿವರು ಹೇಳಿದ್ದಾರೆ. ಎರಡೂ ದೇಶಗಳು ಕ್ರೀಡೆ ಮತ್ತು ಸುಸ್ಥಿರ ನಗರಾಭಿವೃದ್ಧಿ ಕುರಿತ ಒಪ್ಪಂದಗಳಿಗೆ ಸಹಿ ಹಾಕಿದವು ಎಂದು ಸಚಿವರು ತಿಳಿಸಿದ್ದಾರೆ. ಈ ವರ್ಷದುದ್ದಕ್ಕೂ ವಿನಿಮಯಗಳು ಇಂಡೋ-ಸ್ಪ್ಯಾನಿಷ್ ಸಂಬಂಧಗಳನ್ನು ಬಲಪಡಿಸುತ್ತವೆ ಮತ್ತು ಸಹಕಾರಕ್ಕೆ ಹೊಸ ಆವೇಗವನ್ನು ಸೃಷ್ಟಿಸುತ್ತವೆ ಎಂದು ಅವರು ಹೇಳಿದರು. ಏತನ್ಮಧ್ಯೆ, ಸ್ಪೇನ್‌ನಲ್ಲಿ ಭಾರತೀಯ ವಲಸಿಗರನ್ನು ಉದ್ದೇಶಿಸಿ ಮಾತನಾಡಿದ ಅವರು, ಜಾಗತಿಕ ವೇದಿಕೆಯಲ್ಲಿ ಸಬ್ ಕಾ ಸಾತ್- ಸಬ್ ಕಾ ವಿಕಾಸ್ ಮತ್ತು ಸಬ್ ಕಾ ವಿಶ್ವಾಸ್ ಎಂಬ ಭಾರತದ ವಿಧಾನವನ್ನು ಪ್ರತಿಪಾದಿಸಿದರು.

ಧ್ವನಿ: ಜೈಶಂಕರ್

<><><>

ಸಿಂಗಾಪುರದ ಅಧ್ಯಕ್ಷ ಧರ್ಮನ್ ಷಣ್ಮುಗರತ್ನಂ ಅವರು ಇಂದಿನಿಂದ ಐದು ದಿನಗಳ ಭಾರತ ಪ್ರವಾಸ ಕೈಗೊಳ್ಳಲಿದ್ದಾರೆ. ಅವರೊಂದಿಗೆ ಸಚಿವರು, ಸಂಸತ್ ಸದಸ್ಯರು ಮತ್ತು ಅಧಿಕಾರಿಗಳು ಸೇರಿದಂತೆ ಉನ್ನತ ಮಟ್ಟದ ನಿಯೋಗ ಇರಲಿದೆ. ಸಿಂಗಾಪುರದ ಅಧ್ಯಕ್ಷರಾದ ನಂತರ ಇದು ಅವರ ಮೊದಲ ಭಾರತ ಭೇಟಿಯಾಗಿದೆ. ತಮ್ಮ ಭೇಟಿಯ ಸಮಯದಲ್ಲಿ, ಅಧ್ಯಕ್ಷ ಧರ್ಮನ್ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರೊಂದಿಗೆ ಚರ್ಚೆ ನಡೆಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಸಿಂಗಾಪುರದ ಅಧ್ಯಕ್ಷರನ್ನು ಭೇಟಿ ಮಾಡಲಿದ್ದಾರೆ. ಅಧ್ಯಕ್ಷ ಧರ್ಮನ್ ಅವರು ಈ ತಿಂಗಳ ೧೭ ರಿಂದ ೧೮ ರವರೆಗೆ ಒಡಿಶಾಕ್ಕೆ ಭೇಟಿ ನೀಡಲಿದ್ದಾರೆ.

<><><>

ದೇಶೀಯವಾಗಿ ಅಭಿವೃದ್ಧಿಪಡಿಸಿದ ಮೂರನೇ ತಲೆಮಾರಿನ ಆಂಟಿ-ಟ್ಯಾಂಕ್ ಫೈರ್-ಅಂಡ್-ಫಾರ್ಗೆಟ್ ಗೈಡೆಡ್ ಕ್ಷಿಪಣಿ ನಾಗ್ ಎಂಕೆ ೨ ರ ಕ್ಷೇತ್ರ ಮೌಲ್ಯಮಾಪನ ಪ್ರಯೋಗಾರ್ಥ ಪರೀಕ್ಷೆಯನ್ನು ರಾಜಸ್ಥಾನದ ಪೋಖ್ರಾನ್ ಕ್ಷೇತ್ರ ವ್ಯಾಪ್ತಿಯಲ್ಲಿ ಯಶಸ್ವಿಯಾಗಿ ನಡೆಸಲಾಗಿದೆ. ಮೂರು ಕ್ಷೇತ್ರ ಪ್ರಯೋಗಗಳ ಸಮಯದಲ್ಲಿ, ಕ್ಷಿಪಣಿ ವ್ಯವಸ್ಥೆಗಳು ಎಲ್ಲಾ ಗುರಿಗಳನ್ನು ನಿಖರವಾಗಿ ನಾಶಪಡಿಸಿವೆ ಮತ್ತು ಅದರ ಫೈರಿಂಗ್ ವ್ಯಾಪ್ತಿಯನ್ನು ಮೌಲ್ಯೀಕರಿಸಿವೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಪ್ರಯೋಗಾರ್ಥ ಯಶಸ್ಸನ್ನು ಶ್ಲಾಘಿಸಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಭಾರತೀಯ ಸೇನೆ ಮತ್ತು ಉದ್ಯಮದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯನ್ನು ಅಭಿನಂದಿಸಿದ್ದಾರೆ.

<><><>

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ -ಎನ್ ಟಿಎ ನಾಳೆ ನಿಗದಿಯಾಗಿದ್ದ ಯುಜಿಸಿ ನೆಟ್ ಡಿಸೆಂಬರ್ ೨೦೨೪ ಪರೀಕ್ಷೆಯನ್ನು ಮುಂದೂಡಿದೆ. ಜನವರಿ ೧೫ ರಂದು ಪೊಂಗಲ್, ಮಕರ ಸಂಕ್ರಾಂತಿ ಮತ್ತು ಇತರ ಹಬ್ಬಗಳ ಕಾರಣ ಯುಜಿಸಿ ನೆಟ್ ಪರೀಕ್ಷೆಯನ್ನು ಮುಂದೂಡುವಂತೆ ಮನವಿಗಳನ್ನು ಸ್ವೀಕರಿಸಲಾಗಿದೆ ಎಂದು ಎನ್ ಟಿಎ ಹೇಳಿಕೆಯಲ್ಲಿ ತಿಳಿಸಿದೆ. ಪರೀಕ್ಷೆಯ ಹೊಸ ದಿನಾಂಕವನ್ನು ನಂತರ ಪ್ರಕಟಿಸಲಾಗುವುದು. ಇದೇ ೧೬ ರಂದು ನಿಗದಿಯಾಗಿರುವ ಪರೀಕ್ಷೆಯನ್ನು ಹಿಂದಿನ ವೇಳಾಪಟ್ಟಿಯ ಪ್ರಕಾರ ನಡೆಸಲಾಗುವುದು ಎಂದು ಎನ್ ಟಿ ಎ ತಿಳಿಸಿದೆ.

<><><>

ದೆಹಲಿಯ ಕೆ.ಡಿ. ಜಾಧವ್ ಒಳಾಂಗಣ ಕ್ರೀಡಾಂಗಣದಲ್ಲಿ ಇಂಡಿಯಾ ಓಪನ್ ಸೂಪರ್ ೭೫೦ ಬ್ಯಾಡ್ಮಿಂಟನ್ ಪಂದ್ಯಾವಳಿ ಇಂದಿನಿಂದ ಪ್ರಾರಂಭವಾಗಿದೆ. ಪಂದ್ಯಾವಳಿಯಲ್ಲಿ ಅಂತಾರಾಷ್ಟ್ರೀಯ ಒಲಿಂಪಿಕ್ ಚಾಂಪಿಯನ್ ಗಳು ಸೇರಿದಂತೆ ೨೦೦ ಕ್ಕೂ ಹೆಚ್ಚು ಅಗ್ರ ಬ್ಯಾಡ್ಮಿಂಟನ್ ಆಟಗಾರರು ಮತ್ತು ೩೬ ಭಾರತೀಯ ಸ್ಪರ್ಧಿಗಳು ಭಾಗವಹಿಸಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್ ೨೦೨೪ ರ ನಂತರ ದೀರ್ಘ ವಿರಾಮದ ನಂತರ ಮರಳಿರುವ ಪಿ.ವಿ.ಸಿಂಧೂ, ಮಹಿಳಾ ಸಿಂಗಲ್ಸ್ ವಿಭಾಗದ ೩೨ನೇ ಸುತ್ತಿನಲ್ಲಿ ತೈವಾನ್ ನ ಸಂಗ್ ಶುವೊ-ಯುನ್ ಅವರನ್ನು ಎದುರಿಸಲಿದ್ದಾರೆ. ಭಾರತದ ಡಬಲ್ಸ್

ತಾರೆಗಳಾದ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಮಲೇಷ್ಯಾದ ಟೀ ಕೈ ವುನ್ ಮತ್ತು ಮನ್ ವೀ ಚೊಂಗ್ ವಿರುದ್ಧ ಸೆಣಸಲಿದೆ. ಮಲೇಷ್ಯಾ ಓಪನ್ ಸೂಪರ್ ೧೦೦೦ ನಲ್ಲಿ ಸೆಮಿಫೈನಲ್ ತಲುಪಿದ ಈ ಜೋಡಿ ೨೦೨೨ ರ ಇಂಡಿಯಾ ಓಪನ್ ಪ್ರಶಸ್ತಿಯನ್ನು ಮರಳಿ ಪಡೆಯುವ ಗುರಿ ಹೊಂದಿದೆ. ೨೦೨೨ ರ ಚಾಂಪಿಯನ್ ಭಾರತದ ಸ್ಟಾರ್ ಷಟ್ಲರ್ ಲಕ್ಷ್ಯ ಸೇನ್ ಕೂಡ ಲಯ ಕಂಡುಕೊಳ್ಳಲು ಎದುರು ನೋಡುತ್ತಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>